ಇ) ಕೊಳವೆ ಬಾವಿಗಳು ವಿಫಲವಾಗುತ್ತಿದ್ದು, ತೆರೆದ ಬಾವಿ ಕಾರ್ಯಸಾಧ್ಯವೆಂದು ಕಂಡುಬಂದಂತಹ ಗ್ರಾಮಗಳಲ್ಲಿ ತೆರೆದ ಬಾವಿಗಳನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಕುಡಿಯುವ ನೀರಿನಲ್ಲಿ ಗುಣಮಟ್ಟ ಸಮಸ್ಯೆ ಇರುವಂತಹ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಮೇಲ್ಮೈ ಮೂಲದಿಂದ ನೀರು ಸರಬರಾಜು ಮಾಡಲು ಯೋಜನೆಗಳನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಈ ಯೋಜನೆಗಳನ್ನು ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಮಲೇರಿಯಾ ರೋಗ ನಿಯಂತ್ರಣಕ್ಕೆ ಕೀಟನಾಶಕಗಳ ಕೊರತೆ

1257 (1578) ಶ್ರೀ ರಾಮದಾಸ್ ಎ (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೇರಿಯಾ ನಿಯಂತ್ರಣಕ್ಕೆ ಬೇಕಾದ ಕೀಟನಾಶಕಗಳು ಹಾಗೂ ಇತರ ವಸ್ತುಗಳ ಸರಬರಾಜಿಗಾಗಿ ಅನುದಾನದ ಕೊರತೆ ಇರುವುದು ನಿಜವೇ;

ಆ) ಈ ವಸ್ತುಗಳಿಗಾಗಿ ಬೇಕಾದ ನಿಜವಾದ ಅನುದಾನ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಇವಕ್ಕೆ ಸರ್ಕಾರವು ನೀಡಿರುವ ಅನುದಾನ ಎಷ್ಟು; ಕೇಂದ್ರ ಸರ್ಕಾರದಿಂದ ಈ ಕೊರತೆ ತುಂಬಲು ರಾಜ್ಯ ಸರ್ಕಾರವು ಬೇಡಿಕೆ ಸಲ್ಲಿಸಿದೆಯೇ;

ಇ) ಅನುದಾನದ ಕೊರತೆ ಇದ್ದರೂ ಸಹ 2001-02 ನೇ ಸಾಲಿನಲ್ಲಿ ಇಲಾಖೆಯು ಈ ಕಾರ್ಯಕ್ರಮಕ್ಕೆ ಒದಗಿಸಿದ್ದ ಆಯವ್ಯಯವನ್ನು ಹಿಂತಿರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಹಣ ಹಿಂದಿರುಗಿಸಲಾಗಿದೆ;

ಈ) ಈ ಬೇಜವಾಬ್ದಾರಿತನಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಕಳೆದ ಮೂರು ವರ್ಷಗಳಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯಗಳಿಗಾಗಿ ಬೇಕಾದ ಅನುದಾನ ಹಾಗೂ ಒದಗಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ.

ವರ್ಷ	ಬೇಕಾದ ಅನುದಾನ	ಒದಗಿಸಿದ ಅನುದಾನ (ರೂ. ಲಕ್ಷಗಳಲ್ಲಿ)	ಕೊರತೆ
2000-01	335.00	251.47	83.53
2001-02	336.18	83.18	253.00
2002-03	500.00	100.00	400.00

ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನದ ಜೊತೆಗೆ, ವಿಕೇಂದ್ರೀಕೃತವಾದ ಮೆಲಾಥಿಯಾನ್, ಸಿಂಥಿಟಿಕ್ ಪೈರಿಥ್ರಾಯಿಡ್‌ಗಳಿಗೂ ಸಹ ಬೇಡಿಕೆಗಳನ್ನು ಸಲ್ಲಿಸಲಾಗಿದೆ.

ಇ) ವೇತನ ಬಾಬ್ತಿನಲ್ಲಿ ಉಳಿತಾಯವಾದ ಯೋಜನೆಯಡಿಯಲ್ಲಿನ ರೂ. 57.82 ಲಕ್ಷಗಳನ್ನು ಆದ್ಯಾರ್ಪಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿದ ಅನುದಾನವನ್ನು ಹಿಂತಿರುಗಿಸಲಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.